SN – 099

# III Semester B.Com. Examination November/December 2013
## (Repeaters Scheme) (Prior to 2011-12)
## ಕನ್ನಡ ಭಾಷೆ – III
## ವ್ಯಾವಹಾರಿಕ ಕನ್ನಡ ಮತ್ತು ಸಾಹಿತ್ಯ ಸಂವಾದ - 2

Time : 3 Hours Max. Marks : 90

I. ಅ) ಮೂರು ಪ್ರಶ್ನೆಗಳಿಗೆ ಉತ್ತರಿಸಿ : (3×10=30)

1) ವಿಚಾರಣಾ ಪತ್ರ ಎಂದರೇನು ? ಅದರಲ್ಲಿ ಎಷ್ಟು ವಿಧಗಳು ? ವಿವರಿಸಿ. ಧಾರವಾಡದ ಪುಸ್ತಕ ವ್ಯಾಪಾರಿಯೊಬ್ಬರು ಬೆಂಗಳೂರಿನ ಪುಸ್ತಕ ವ್ಯಾಪಾರಿಯೊಬ್ಬರಿಗೆ ಬರೆದಂತೆ ಒಂದು ವಿಚಾರಣಾ ಪತ್ರವನ್ನು ಬರೆಯಿರಿ.

2) ವಾಣಿಜ್ಯ ಪತ್ರದ ವಿವಿಧ ಅಂಗಗಳಾವುವು ? ವಿವರಿಸಿ.

3) ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಯೊಬ್ಬ ಫಲಿತಾಂಶ ಪಟ್ಟಿಯಲ್ಲಿ ವಿಷಯವೊಂದರ ಅಂಕ ನಮೂದಾಗದಿರುವುದನ್ನು ಕುಲಸಚಿವರ ಗಮನಕ್ಕೆ ತರುವ ಪತ್ರವೊಂದನ್ನು ಸಿದ್ಧಪಡಿಸಿ.

4) ಸುತ್ತೋಲೆ ಎಂದರೇನು ? ಕಾಲೇಜಿನ ಪ್ರಾಂಶುಪಾಲರೊಬ್ಬರು ಸಂಸ್ಥೆಯ ಆವರಣದಲ್ಲಿ ವಿದ್ಯಾರ್ಥಿಗಳು ಶಿಸ್ತು ಪಾಲಿಸಬೇಕೆಂದು ಆದೇಶಿಸುವ ಸುತ್ತೋಲೆಯೊಂದನ್ನು ಬರೆಯಿರಿ.

5) ಕಾಲೇಜಿನ ವಿದ್ಯಾರ್ಥಿಸಂಘದ ಕಲಾಪದ ನಿರ್ಣಯಗಳನ್ನು ತಿಳಿಸಿ, ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ.

ಆ) ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ : (4×5=20)

1) ಆದೇಶ ಪತ್ರ

2) ಅಭ್ಯರ್ಥನ ಪತ್ರ

3) ಪತ್ರದ ಒಡಲು

4) ಪ್ರತ್ಯುತ್ತರ ಪತ್ರ

5) ಸಭೆಯ ತಿಳಿವಳಿಕೆ ಪತ್ರ

6) ನಿಮ್ಮ ಊರಿನ ರಸ್ತೆಗಳ ದುಸ್ಥಿತಿ ಬಗ್ಗೆ ಸಂಕ್ಷಿಪ್ತ ದೂರು.

## ಸಾಹಿತ್ಯ ಸಂವಾದ – ಭಾಗ – 2

II. ಅ) ಎರಡು ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆ ಆಧರಿಸಿ ಉತ್ತರಿಸಿ. (2×5=10)

1) ರಣರಂಗದಲ್ಲಿ ವೀರ ಮರಣ ಹೊಂದಿದ ಗುರು , ಮಿತ್ರ, ಸೋದರರನ್ನು ಕಂಡ ದುರ್ಯೋಧನನು ಹೇಗೆ ಶೋಕಿಸಿದನು ?

2) ಸಾವನ್ನು ಕುರಿತ ನಿಗೂಢತೆ 'ಆಟ' ಕಥೆಯಲ್ಲಿ ಹೇಗೆ ಚಿತ್ರಿತವಾಗಿದೆ ?

3) 'ಆ ಮನಿ' ನಾಟಕದಲ್ಲಿ ಮಕ್ಕಳ ನಡುವಳಿಕೆಗಳು ಹಿರಿಯರಿಗಿಂತ ಹೇಗೆ ಭಿನ್ನವಾಗಿವೆ ?

4) ಅಪ್ಪಣ್ಣಭಟ್ಟರ ಲೋಕಪ್ರಿಯತೆಗೆ ಕಾರಣವೇನು ?

ಆ) ಎರಡು ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ. **(2×5=10)**

1) ರಣರಂಗದಲ್ಲಿ ಅಭಿಮನ್ಯು, ಲಕ್ಷಣಕುಮಾರರ ಕಳೇಬರವನ್ನು ಕಂಡಾಗ ದುರ್ಯೋಧನನ ಪ್ರತಿಕ್ರಿಯೆಯೇನು ?

2) 'ಸಂತೆ' ಕವಿತೆಯಲ್ಲಿ ಏನೇನನ್ನು ಮಾರಾಟಕ್ಕಿಟ್ಟಿದ್ದಾರೆ ?

3) 'ಆ ಮನಿ' ನಾಟಕ ಸಾವಿನ ಕಥೆಯನ್ನು ಹೇಳುತ್ತಲೇ ಬದುಕಿನ ಕಡೆಗೂ ಹೇಗೆ ಕರೆದೊಯ್ಯುತ್ತದೆ ?

4) ವಾಣಿಜ್ಯದಲ್ಲಿ ನೀತಿ ಬೆರೆತಾಗ ವ್ಯಾಪಾರ ಹೇಗಿರುತ್ತದೆ ? 'ಅಡಕೆಯ ಮಾನ' ಲೇಖನದ ಹಿನ್ನೆಲೆಯಲ್ಲಿ ತಿಳಿಸಿ.

ಇ) ಎರಡು ಪ್ರಶ್ನೆಗಳಿಗೆ ಸ್ವಂತ ಆಲೋಚನೆ/ ಅನುಭವಗಳ ಹಿನ್ನೆಲೆಯಲ್ಲಿ ವಿಶ್ಲೇಷಣಾತ್ಮಕ ಉತ್ತರ ಬರೆಯಿರಿ. **(2×10=20)**

1) 'ಯೇಕುಸಿರದಿರ್ದಯಂಗಾಧಿಪತೀ' – ಈ ಮಾತಿನಲ್ಲಿ ವ್ಯಕ್ತವಾಗುವ ದುರ್ಯೋಧನನ ಶೋಕದ ತೀವ್ರತೆಯನ್ನು ಕುರಿತು ಬರೆಯಿರಿ.

2) 'ಆ ಮನಿ' ನಾಟಕದಲ್ಲಿ ಭೂತ ಮತ್ತು ವರ್ತಮಾನದ ಪ್ರತಿನಿಧಿಗಳು ಯಾರು ? ಭವಿಷ್ಯದ ಬಗ್ಗೆ ಅವರ ಚಿಂತನೆಗಳೇನು ? ವಿವರಿಸಿ.

3) ಕುಪ್ಪಣ್ಣಭಟ್ಟರ ಮಾತು – ಮೌನಗಳ ವಿಧಾನದ ಹಿನ್ನೆಲೆಯಲ್ಲಿ ಅವರ ಸ್ವಭಾವದ ಗುಣಲಕ್ಷಣಗಳನ್ನು ಹೇಗೆ ಗ್ರಹಿಸಬಹುದು ? ವಿಶದಪಡಿಸಿ.

4) ಲೇಖಕರು ಪ್ರಸ್ತಾಪಿಸುವ 'ವಿನಾಶಕಾರಿ ನಾಗರಿಕತೆ'ಯ ಲಕ್ಷಣಗಳೇನು ? 'ಅಡಕೆಯ ಮಾನ' ಲೇಖನದ ಆಧಾರದಿಂದ ನಿರೂಪಿಸಿ.

---

**SN – 099**

## III Semester B.Com. Examination November/December 2013
## (Repeaters Scheme) (Prior to 2010-11Scheme)
### ಕನ್ನಡ ಭಾಷಾ ಪತ್ರಿಕೆ - III
### ಹೊಸಗನ್ನಡ ಕಾವ್ಯ ಮತ್ತು ವ್ಯಾವಹಾರಿಕ ಕನ್ನಡ

Time : 3 Hours Max. Marks : 90

ಭಾಗ - ೧

I. ಅ) ಒಂದರ ಭಾವವನ್ನು ವಿವರಿಸಿ. (1×5=5)

1) ಹೆರರ ನೋವಿಗೆ ಅಯ್ಯೊ ಎಂದು
ಮರುಗಿ ಸುಯ್ಯಲನಿಡಲು ಒಲವೆ ?
ಹಿರಿಯ ಸುಖದಿರವೆನ್ನದೆನ್ನುವ
ಅರಿವು ಒಲಿದವಗಿರುವುದೆ ?

2) ಇರುಳ ಬಸಿರ ಬಗೆದು ಉದಯರಾಗ ಬರುವುದೆಂದಿಗೆ
ನನ್ನ ನಾಡ ಮಂದಿಗೆ ?
ನಾಡ ಮೂಲೆ ಮೂಲೆಗೆ, ರಾಜ ಬೀದಿ ಸಂದಿಗೆ,
ಕ್ರಾಂತಿಭಾನು ಹೊಳೆದು ಹೊಂಬೆಳಕು ಚೆಲ್ಲುದೆಂದಿಗೆ ?

ಆ) ಯಾವುದಾದರೂ ಎರಡನ್ನು ಸಂದರ್ಭ ಸಹಿತ ವಿವರಿಸಿ : (2×3=6)

1) ಕರುಣೆ ಒಲುಮೆಗೆ ಸಾಟಿಯೆ ?
2) ಆದಿಶೇಷ ಹೊತ್ತ ಭೂಮಿ ಅಂತ್ಯಶೇಷದಂತಿದೆ
3) ರಂಗಮಂದಿರ ಅದೇ, ನಾಟಕವೂ ಅದೇ
4) ಗಡಿಯಾರ ತಿರುಗುವುದು ಇವನಿಂದ

ಇ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. (2×2=4)

ಅಹಲ್ಯೆ, ಅಕ್ಕಮಹಾದೇವಿ, ಕೆ.ಎಸ್. ನರಸಿಂಹಸ್ವಾಮಿ, ದಲಿತ ಕಾವ್ಯ.

II. **ಒಂದು** ಪ್ರಶ್ನೆಯನ್ನು ಕುರಿತು ಸಂಕ್ಷಿಪ್ತ ಉತ್ತರ ಬರೆಯಿರಿ. (1×5=5)

1) 'ಪುರುಷ ಸೂಕ್ತ' ಕವಿತೆಯಲ್ಲಿ ಭಾರತದ ಸಾಧನೆಯ ಚಿತ್ರಣ ಹೇಗೆ ಮೂಡಿಬಂದಿದೆ ?
2) ಬಡವರ ಹಸಿವಿನ ಸಹನೆ ಮೀರಿದಾಗ ಆಗುವ ಬದಲಾವಣೆಗಳನ್ನು ಬೇಂದ್ರೆ ಹೇಗೆ ಚಿತ್ರಿಸಿದ್ದಾರೆ ?

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರವನ್ನು ಬರೆಯಿರಿ. (2×10=20)

1) ಭೂಮಿ ಮತ್ತು ಮನುಷ್ಯನ ಸಂಬಂಧವನ್ನು ಕೆ. ಎಸ್. ಎನ್. ರವರ ಕವಿತೆಯ ಮುಖಾಂತರ ಚರ್ಚಿಸಿ.

2) ಜೋಮನ ಮಕ್ಕಳ ಹಾಡು ಕವನದ ಆಶಯವನ್ನು ಕುರಿತು ಬರೆಯಿರಿ.

3) ಚೆನ್ನಿಯ ತೊಳಲಾಟವು 'ಮುದಿಯ ರಾಮಗೌಡ' ಕವಿತೆಯಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ.

4) ಕುವೆಂಪು ಅಹಲ್ಯೆಯನ್ನು ಶಿಲಾ ತಪಸ್ವಿಯಾಗಿ ಕಂಡಿರುವ ಬಗೆಯನ್ನು ವಿವರಿಸಿ.

## ಭಾಗ - ೨

IV. ವಾಣಿಜ್ಯ ಪತ್ರದ ವಿನ್ಯಾಸ ಹಾಗೂ ಸ್ವರೂಪವನ್ನು ವಿವರಿಸಿ. (1×10=10)

V. ಪ್ರತ್ಯುತ್ತರ ಪತ್ರವೊಂದನ್ನು ಉದಾಹರಣೆಯೊಂದಿಗೆ ರಚಿಸಿರಿ. (1×10=10)

ಅಥವಾ

ಆದೇಶ ಪತ್ರ ಎಂದರೇನು ? ಸೋದಾಹರಣಪೂರ್ವಕವಾಗಿ ವಿವರಿಸಿ.

VI. ವಿಚಾರಣಾ ಪತ್ರ ಎಂದರೇನು ? ಹೊಂಡಾ ಕಂಪನಿಯವರಿಗೆ ವಿಚಾರಣಾ ಪತ್ರವೊಂದನ್ನು ಬರೆದು ವಿವರಿಸಿ. (1×10=10)

ಅಥವಾ

ಆಕ್ಷೇಪಣಾ ಪತ್ರ ಎಂದರೇನು ? ಈ ಪತ್ರವನ್ನು ಬರೆಯುವ ಸಂದರ್ಭವನ್ನು ಮಾದರಿಯೊಂದಿಗೆ ವಿವರಿಸಿ.

VII. ಸಮೂಹ ಮಾಧ್ಯಮಗಳೆಂದರೇನು ? ಅದರ ವಿಶಿಷ್ಟ ಲಕ್ಷಣಗಳನ್ನು ವಿವರಿಸಿ. (1×10=10)

ಅಥವಾ

ಪರಾಮರ್ಶನ ಪತ್ರ ಎಂದರೇನು ? ಬರೆಯುವ ಸಂದರ್ಭಗಳು ಯಾವುವು ? ಮಾದರಿ ಪತ್ರದೊಂದಿಗೆ ವಿವರಿಸಿ.

VIII. ನಾಲ್ಕನ್ನು ಕುರಿತು ಟಿಪ್ಪಣಿ ಬರೆಯಿರಿ. (4×2½=10)

1) ಶೀರ್ಷಿಕೆ/ತಲೆಬರಹ

2) ಉಳಿತಾಯ ಖಾತೆ

3) ಸುತ್ತೋಲೆ

4) ಒಳವಿಳಾಸ

5) ದೂರದರ್ಶನ

6) ಪ್ರತ್ಯುತ್ತರ ಪತ್ರ.